# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ:ಶಾಭ:878:ವಾಬ:2022

ವಿಧಾನ ಪರಿಷತ್ತಿನ ಸಚಿವಾಲಯ,
ಶಾಸಕರ ಭವನ,
ಬೆಂಗಳೂರು–560 001, ದಿನಾಂಕ:30.11.2022

## ಅಧಿಸೂಚನೆ

ವಿಷಯ: ಶಾಸಕರ ಭವನದ ಅಧಿಕೃತ ವಾಹನಗಳನ್ನು ಟೆಂಡರ್/ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

******

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಈ ಕೆಳಗಿನ ಅನುಬಂಧ–Iರಲ್ಲಿ ಸೂಚಿಸಿರುವ ಕಾರುಗಳನ್ನು ಪ್ರತ್ಯೇಕವಾಗಿ ಟೆಂಡರ್/ಸಾರ್ವಜನಿಕ ಹರಾಜಿನಿಂದ ಮಾತ್ರವೇ ಮಾರಾಟ ಮಾಡಲಾಗುವುದು ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

## ಅನುಬಂಧ–1
## ಕಾರುಗಳ ವಿವರಗಳು

| ಕ್ರಮ ಸಂಖ್ಯೆ | ವಾಹನಗಳ ನೋಂದಣಿ ಸಂಖ್ಯೆ | ವಾಹನಗಳ ವಿಧ | ಮಾದರಿ/ ತಯಾರಿಸಿದ ವರ್ಷ | ಸಾರಿಗೆ ಅಧಿಕಾರಿಗಳು ನಿಗದಿಪಡಿಸಿರುವ ದರ |
|---|---|---|---|---|
| 01. | ಕೆಎ–01–ಜಿ–5697 | ಸ್ಕೋಡಾ | 2013 | ರೂ.7.00ಲಕ್ಷ |
| 02. | ಕೆಎ–43–ಜಿಎ–0999 | ಸ್ಕೋಡಾ | 2016 | ರೂ.11.40ಲಕ್ಷ |
| 03. | ಕೆಎ–01–ಜಿಎ–0279 | ಫಾರ್ಚುನರ್ | 2014 | ರೂ.7.49ಲಕ್ಷ |
| 04. | ಕೆಎ–41–ಜಿಎ–7777 | ಫಾರ್ಚುನರ್ | 2016 | ರೂ.12.50ಲಕ್ಷ |

ಕಾರುಗಳನ್ನು ಶಾಸಕರ ಭವನದ ಆವರಣ, ಬೆಂಗಳೂರು–560001 ಇಲ್ಲಿ ದಿನಾಂಕ:08.12.2022ರಂದು ಬೆಳಿಗ್ಗೆ 11.00 ಗಂಟೆಗೆ ಟೆಂಡರ್/ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಲಾಗುವುದು.

**ಎ) ಹರಾಜಿಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳು:-**

1. ಹರಾಜನ್ನು ಶಾಸಕರ ಭವನ-1, 4ನೇ ಮಹಡಿ, ಸಮ್ಮೇಳನ ಸಭಾಂಗಣ, ಬೆಂಗಳೂರು-560001 ಇಲ್ಲಿ ದಿನಾಂಕ:08.12.2022ರಂದು ಬೆಳಿಗ್ಗೆ:11.00ಗಂಟೆಗೆ ಪ್ರಾರಂಭಿಸಲಾಗುವುದು.

2. **ಉದ್ದೇಶಿತ ಬಿಡ್‌ದಾರರು ಮೇಲಿನ ಕಾರುಗಳನ್ನು ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ದಿನಾಂಕ:30.11.2022ರಿಂದ ಯಾವುದೇ ದಿನದಂದು ಬೆಳಿಗ್ಗೆ:11.00ಗಂಟೆಯಿಂದ ಸಂಜೆ: 5.00 ಗಂಟೆಯೊಳಗೆ ಶಾಸಕರ ಭವನದ ಆವರಣ, ಬೆಂಗಳೂರು ಇಲ್ಲಿ ಪರಿಶೀಲಿಸಬಹುದಾಗಿದೆ.**

3. ಅಲ್ಲದೆ ಕಾರುಗಳಿಗೆ ಸಂಬಂಧಿಸಿದ ಬಿಡ್‌ದಾರರು, ಪ್ರತಿಯೊಂದು ಕಾರಿಗೆ ಸಂಬಂಧಿಸಿದಂತೆ "ಬಿಡ್‌ದಾರರಿಗಾಗಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ"ಖಂಡ (ಬಿ) ಕಂಡಿಕೆ (1) ರಲ್ಲಿ ನಮೂದಿಸಿರುವಂತೆ ನಗದು ಮೂಲಕ ಅಥವಾ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಇವರ ಹೆಸರಿನಲ್ಲಿ ಡಿ.ಡಿ ಮೂಲಕ ಹಣ ಪಾವತಿಸತಕ್ಕದ್ದು, ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಇ.ಎಂ.ಡಿ ಮೊತ್ತವನ್ನು ಠೇವಣಿ ಇಡುವುದಕ್ಕೆ ಒಳಪಟ್ಟು, ಹರಾಜಿನಲ್ಲಿ ಬಿಡ್ ಮಾಡಲು ಹಕ್ಕುಳ್ಳವರಾಗಿರತಕ್ಕದ್ದು.

4. ಹರಾಜಿನ ದಿನದಂದು, ಹರಾಜು ಮಾರಾಟವನ್ನು ನಡೆಸುವ ಅಧಿಕಾರಿಗಳು ನಿರ್ದಿಷ್ಟ ಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಬಿಡ್‌ಗಳನ್ನು ಕರೆಯತಕ್ಕದ್ದು.

5. ಮುಂಗಡ ಹಣ ಠೇವಣಿ ಮಾಡದಿರುವಂತಹ ವ್ಯಕ್ತಿಯು ಹರಾಜಿನಲ್ಲಿ ಭಾಗವಹಿಸಲು ಅನರ್ಹನಾಗಿರತಕ್ಕದ್ದು.

6. ಸಾರ್ವಜನಿಕ ಹರಾಜನ್ನು ನಡೆಸುವ ಅಧಿಕಾರಿಗಳು ಬಿಡ್ಡಿಂಗ್ ಅನ್ನು ಮುಂದುವರೆಸದಿರುವ, ಅಂತಹ ಯಾರೇ ವ್ಯಕ್ತಿಯ ಹೆಸರನ್ನು ಖರೀದಿದಾರ/ಕೊಂಡುಕೊಳ್ಳುವವರಂತೆ ನೋಂದಾಯಿಸುವುದನ್ನು ನಿರಾಕರಿಸತಕ್ಕದ್ದು.

7. ಸಾರ್ವಜನಿಕ ಹರಾಜನ್ನು ನಡೆಸುವ ಅಧಿಕಾರಿಗಳು ತಮ್ಮ ವಿವೇಚನೆಯಲಿ ಯಾವುದೇ ಕಾರಣವನ್ನು ನೀಡದೆ ಯಾರೇ ವ್ಯಕ್ತಿಯ ಯಾವುದೇ ಬಿಡ್ ಅಥವಾ ಒಪ್ಪಿದ ಬೆಲೆಯನ್ನು ಅಂಗೀಕರಿಸುವುದನ್ನು ನಿರಾಕರಿಸಬಹುದು.

**ಬಿ) ಸಾಮಾನ್ಯ ಷರತ್ತುಗಳು ಮತ್ತು ನಿಬಂಧನೆಗಳು:-**

1. ಅಂತಹ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬ ಬಿಡ್‌ದಾರನು, ಪ್ರತಿಯೊಂದು ಸಂದರ್ಭದಲ್ಲೂ ಪ್ರತಿಕಾರಿಗೆ ರೂ.50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಮುಂಗಡ ಹಣವನ್ನು ಠೇವಣಿಯಾಗಿ ಇಡತಕ್ಕದ್ದು. ಮುಂಗಡ ಠೇವಣಿ ಹಣವನ್ನು (ಇ.ಎಂ.ಡಿ) ಕ್ಷೇತ್ರಾಧಿಕಾರಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಶಾಸಕರ ಭವನ-1, ಬೆಂಗಳೂರು, ಇವರು ದಿನಾಂಕ:06.12.2022ರಂದು ಸಾಯಂಕಾಲ 4.00 ಗಂಟೆಯವರೆಗೆ ಉದ್ದೇಶಿತ ಬಿಡ್‌ದಾರರಿಂದ ಸ್ವೀಕರಿಸಬಹುದಾಗಿರುತ್ತದೆ ಹಾಗೂ ತದನಂತರ ಸ್ವೀಕರಿಸಿದ ಠೇವಣಿಗಳನ್ನು ಅಂಗೀಕರಿಸತಕ್ಕದ್ದಲ್ಲ. ಸಾಂಕೇತಿಕ ಮುಂಗಡ ಹಣವನ್ನು ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಕ್ಷೇತ್ರಾಧಿಕಾರಿಯವರು ರಸೀದಿಯನ್ನು ನೀಡತಕ್ಕದ್ದು.

2. ಬಿಡ್‌ನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು ಪ್ರತ್ಯೇಕ ವಾಹನಕ್ಕೆ ರೂ.200/-ಗಳಂತೆ ಅರ್ಜಿ ಶುಲ್ಕವನ್ನು ಪಾವತಿಸಿ ಟೆಂಡರ್/ಸಾರ್ವಜನಿಕ ಹರಾಜು ಅಧಿಸೂಚನೆ ಮತ್ತು ಅರ್ಜಿ ನಮೂನೆಯನ್ನು ಪಡೆಯಬಹುದಾಗಿದೆ.

3. ಹರಾಜು ಮಾಡಲಾಗುವ ವಾಹನಗಳಿಗೆ ಸಾರಿಗೆ ಅಧಿಕಾರಿಯವರು ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬಿಡ್‌ಅನ್ನು ದಾಖಲಿಸತಕ್ಕದ್ದು. ಬಿಡ್‌ದಾರರ ಸಹಿಯನ್ನು ಬಿಡ್‌ದಾರರ ಪಟ್ಟಿಯಲ್ಲಿ ತೆಗೆದುಕೊಳ್ಳತಕ್ಕದ್ದು. ಹರಾಜು ಮಾರಾಟವನ್ನು ನಡೆಸುವ ಅಧಿಕಾರಿಗಳು ತಮ್ಮ ವಿವೇಚನೆಯಲ್ಲಿ ಅವರು ಸೂಕ್ತವೆಂದು ಭಾವಿಸಲಾದಂತೆ ಟೆಂಡರ್‌ಗಳ ಮೂಲಕವಾಗಲೀ ಅಥವಾ ಹರಾಜು ಮಾರಾಟದಲ್ಲಾಗಲೀ ಸ್ವೀಕರಿಸಿದ ಅತೀ ಹೆಚ್ಚಿನ ಬೆಲೆಯನ್ನು ಅಂಗೀಕರಿಸಬಹುದು.

4. ನಿಗದಿತ ಠೇವಣಿ ಪಾವತಿಸಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹತೆ ಪಡೆದ ಬಿಡ್‌ದಾರರು ಕಾರಣಾಂತರಗಳಿಂದ ಬಿಡ್‌ದಿನದಂದು ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಬಿಡ್‌ದಾರರು ತಮ್ಮ ಬಿಡ್ ದರವನ್ನು ಮುಚ್ಚಿದ ಲಕೋಟೆಯಲ್ಲಿ ವಾಹನ ಸಂಖ್ಯೆಯನ್ನು ಮತ್ತು ದರವನ್ನು ನಮೂದಿಸಿ ಸಲ್ಲಿಸಬಹುದಾಗಿರುತ್ತದೆ. ಮುಚ್ಚಿದ ಲಕೋಟೆಯಲ್ಲಿನ ದರವನ್ನು ಪ್ರಾರಂಭಿಕ ಬಿಡ್‌ದರವಾಗಿ ಪರಿಗಣಿಸಲಾಗುವುದು. ಬಹಿರಂಗ ಹರಾಜಿನಲ್ಲಿ ಸದರಿದರದ ನಂತರದ ಮೊತ್ತವನ್ನು ಬಿಡ್ ಮಾಡತಕ್ಕದ್ದು.

5. ಯಾವುದೇ ಬಿಡ್‌ದಾರರು ಬಿಡ್‌ನಲ್ಲಿ ಭಾಗವಹಿಸಿ ಯಶಸ್ವಿ ಬಿಡ್‌ದಾರರಾದಲ್ಲಿ ಅವರು ಪುನ: ಮತ್ತೊಂದು ವಾಹನಕ್ಕೆ ಬಿಡ್‌ದಾರರಾಗಿ ಭಾಗವಹಿಸಲು ಇಚ್ಛಿಸಿದಲ್ಲಿ, ನಿಗದಿತ ದಿನಾಂಕಕ್ಕೆ ಮುಂಚಿತವಾಗಿ ಪ್ರತ್ಯೇಕವಾಗಿ ಇ.ಎಂ.ಡಿ. ಮೊತ್ತವನ್ನು ಪಾವತಿಸಿರುವ ಬಿಡ್‌ದಾರರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು.

6. ಯಶಸ್ವಿ ಬಿಡ್‌ದಾರರು ಬಿಡ್‌ನ ದಿನಾಂಕದಿಂದ ಮೂರು ದಿನಗಳೊಳಗಾಗಿ ಬಾಕಿ ಮೊತ್ತವನ್ನು ಪಾವತಿಸಿ, ವಾಹನವನ್ನು ವಶಕ್ಕೆ ಪಡೆಯತಕ್ಕದ್ದು ತಪ್ಪಿದಲ್ಲಿ, ಠೇವಣಿ ಮಾಡಿದ ಮುಂಗಡ ಹಣವು (ಇ.ಎಂ.ಡಿ) ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು. ಸದರಿ ವಾಹನಕ್ಕೆ ಯಶಸ್ವಿ ಬಿಡ್ ಮೊತ್ತದ ನಂತರದ ಹತ್ತಿರವಾಗಿರುವ ಬಿಡ್‌ದಾರರನ್ನು ಯಶಸ್ವಿ ಬಿಡ್‌ದಾರರನ್ನಾಗಿ ಪರಿಗಣಿಸಿ ವಾಹನ ವಿಲೇವಾರಿಗೆ ಸೂಕ್ತ ಕ್ರಮ ವಹಿಸಲಾಗುವುದು.

7. ಮಾರಾಟವು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ಸ್ಥಿರೀಕರಣಗೊಳ್ಳುವವರೆಗೆ ಪೂರ್ಣಗೊಳ್ಳುವುದಿಲ್ಲ.

**ತೆರಿಗೆಗಳು:**

ಚಾಲ್ತಿಯಲ್ಲಿರುವ ಸುಂಕ ಪದ್ಧತಿಯ ಪ್ರಕಾರ ಕರ್ನಾಟಕ ಮಾರಾಟ ತೆರಿಗೆ/ಕೇಂದ್ರಿಯ ಮಾರಾಟ ತೆರಿಗೆ/ವ್ಯಾಟ್(ಸಂದರ್ಭಾನುಸಾರವಾಗಿ) **ಜಿ.ಎಸ್.ಟಿ–ಶೇ.18**ರಷ್ಟು ಅನ್ವಯವಾಗತಕ್ಕದ್ದು ಮತ್ತು ಪ್ರಕ್ರಿಯಾ ಶುಲ್ಕಗಳು ಹೆಚ್ಚುವರಿಯಾಗಿರುತ್ತವೆ.

**ಪಾವತಿ ಮತ್ತು ತಲುಪಿಸುವಿಕೆ:**

ಎಲ್ಲಾ ತೆರಿಗೆಗಳು ಮತ್ತು ಕರಗಳು ಹೆಚ್ಚುವರಿಯಾಗಿರತಕ್ಕದ್ದು, ವಾಹನ ಪಡೆಯಲು ಹಣ ಸಂದಾಯ ಮಾಡುವ ಸಮಯದಲ್ಲಿ ಅನ್ವಯವಾಗುವ ತೆರಿಗೆಗಳೊಂದಿಗೆ ಬಾಕಿ ಹಣ ಪಾವತಿಯನ್ನು ಕ್ಷೇತ್ರಾಧಿಕಾರಿ, ಕರ್ನಾಟಕ ವಿಧಾನ ಪರಿಷತ್ತು, ಶಾಸಕರ ಭವನ, ಬೆಂಗಳೂರು–560001, ಇವರಿಗೆ ಸಂದಾಯಮಾಡತಕ್ಕದ್ದು.

ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ವಿಧಾನಸೌಧ, ಬೆಂಗಳೂರು–560 001 ಇವರಿಂದ ಪಡೆದುಕೊಂಡ ಬಟವಾಡೆ ಆದೇಶವನ್ನು ಹಾಜರುಪಡಿಸಿದ ಮೇಲೆ ತೆರಿಗೆಗಳೊಂದಿಗೆ ಸರಕುಗಳ ಸಂಪೂರ್ಣ ಮೌಲ್ಯವನ್ನು ಪಾವತಿಸಿದ ನಂತರ ಮಾತ್ರ ಸರಕುಗಳನ್ನು ಪಡೆದುಕೊಳ್ಳಲು ಅನುಮತಿ ನೀಡಲಾಗುವುದು. ವಾಹನಗಳ ಆರ್.ಸಿ. ಬುಕ್, ತೆರಿಗೆಕಾರ್ಡ್ ಮತ್ತು ದಾಖಲೆಗಳನ್ನು ಬಿಡ್ ವಾಹನಗಳ ನೋಂದಣಿಯನ್ನು ಬದಲಾಯಿಸಿದ ನಂತರ, ಬಿಡ್‌ದಾರನು ಯಾವ ಸಂಬಂಧಪಟ್ಟ ಆರ್.ಟಿ.ಓರವರಿಂದ ಅವುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೋ ಅವರಿಗೆ ಹಸ್ತಾಂತರಿಸಬೇಕಾಗಿರುತ್ತದೆ. ಸದರಿ ನೋಂದಣಿಗಳೊಂದಿಗಿನ ವಾಹನಗಳ ಯಾವುದೇ ಬಳಕೆಯು ಮೋಟಾರು ವಾಹನಗಳ ಅಧಿನಿಯಮದ ಅಡಿ ಶಿಕ್ಷಾರ್ಹವಾಗಿರುತ್ತದೆ.

**ಬಟವಾಡೆ ಪಡೆದುಕೊಳ್ಳಲು ಅಧಿಕಾರ ನೀಡುವುದು:–**

ಖರೀದಿದಾರನು ಪ್ರತಿನಿಧಿಯ ಮೂಲಕ ಕಾರುಗಳ ಬಟವಾಡೆ ಪಡೆದುಕೊಳ್ಳಲು ಇಚ್ಛಿಸಿದ್ದಲ್ಲಿ, ತನ್ನ ಪ್ರತಿನಿಧಿಯ ಹೆಸರನ್ನು ಸ್ಪಷ್ಟವಾಗಿ ಬರೆದು ಆತನ ಮಾದರಿ ಸಹಿಯನ್ನು ಕ್ರಮಬದ್ಧವಾಗಿ ದೃಢೀಕರಿಸಿದ ಅಧಿಕಾರ ಪತ್ರದ ಮೂಲಕ ಅಧಿಕೃತಗೊಳಿಸಿರತಕ್ಕದ್ದು. ಆದಾಗ್ಯೂ, ಕರ್ನಾಟಕ ವಿಧಾನ ಪರಿಷತ್ತು ಪ್ರತಿನಿಧಿಯ ಗುರುತಿಸುವಿಕೆ ಮತ್ತು ತಪ್ಪಾದ ಬಟವಾಡೆಗೆ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳತಕ್ಕದಲ್ಲ.

**ಬಟವಾಡೆ ದಾಖಲೆಗಳ ಪ್ರತಿಗಳು:–**

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ನಮೂನೆ 29ಅನ್ನು ಕರ್ನಾಟಕ ವಿಧಾನ ಪರಿಷತ್ತಿನಿಂದ ನೀಡಲಾಗುವುದಿಲ್ಲ. ಖರೀದಿದಾರರು ತಮ್ಮೊಂದಿಗೆ ನಮೂನೆ 29ನ್ನು ತರಬೇಕಾಗಿರುತ್ತದೆ. ಅಂತೆಯೇ ವಾಹನವನ್ನು "ಯಾವ ಸ್ಥಿತಿಯಲ್ಲಿವೆಯೋ ಹಾಗೂ ಎಲ್ಲಿರುವವೋ ಹಾಗೆಯೇ" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಚೆಕ್ ಪೋಸ್ಟ್ ಔಪಚಾರಿಕ ಕಾರ್ಯಗಳನ್ನು ಪಾಲಿಸಲು ಯಾವುದೇ

ಹೆಚ್ಚುವರಿ ಚಲನ್/ಮಾರಾಟದ ಆದೇಶ, ಬಟವಾಡೆ ಆದೇಶದ ಪ್ರತಿಗಳನ್ನು ಅಗತ್ಯಪಡಿಸಿದ್ದಲ್ಲಿ, ಸದರಿ ಪ್ರತಿಗಳನ್ನು ಖರೀದಿದಾರರೇ ಸ್ವತಃ ಜೆರಾಕ್ಸ್ ತೆಗೆದುಕೊಳ್ಳುವ ಮೂಲಕ ವ್ಯವಸ್ಥೆ ಮಾಡಿಕೊಳ್ಳಬಹುದಾಗಿರುತ್ತದೆ.

**ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯದ ನಿಯಂತ್ರಣವನ್ನು ಮೀರಿದ ಸಂದರ್ಭಗಳಿಂದಾಗಿ ವಿಳಂಬವಾದ ಬಟವಾಡೆಗಳು:-**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಮುಷ್ಕರಗಳು, ಲಾಕ್‌ಔಟ್, ಕಾರ್ಮಿಕರ ವಿರಾಮ, ಕಡಿಮೆ ಸಮಯ, ದೈವಿಕ ಕಾರ್ಯ ಅಥವಾ ಇತರ ಅನಿರೀಕ್ಷಿತ ಘಟನೆಗಳಿಂದ ತನ್ನ ನಿಯಂತ್ರಣವನ್ನು ಮೀರಿದ ಕಾರಣಗಳಿಂದಾಗಿ ವಾಹನಗಳ ಬಟವಾಡೆ ಮಾಡುವುದಕ್ಕೆ ತಪ್ಪಿದಲ್ಲಿ, ಅದಕ್ಕೆ ಯಾವುದೇ ರೀತಿಯಲ್ಲಿ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದಲ್ಲ. ಅವುಗಳ ಖರೀದಿದಾರರು ಕರಾರನ್ನು ರದ್ದುಗೊಳಿಸಲು ಹಕ್ಕುಳ್ಳವರಾಗಿರತಕ್ಕದಲ್ಲ ಮತ್ತು ಬಟವಾಡೆ ಅವಧಿಯನ್ನು ಅದಕ್ಕನುಸಾರವಾಗಿ ಪ್ರಮಾಣಾನುಸಾರ ವಿಸ್ತರಿಸಿಕೊಳ್ಳತಕ್ಕದ್ದಾಗಿರುತ್ತದೆ.

**ಹರಾಜು/ಬಟವಾಡೆ ಸಂದರ್ಭದಲ್ಲಿನ ನಡವಳಿಕೆ:-**

ಶಾಸಕರ ಭವನದ ಆವರಣದಲ್ಲಿ ಹರಾಜು ಮಾಡುತ್ತಿರುವಾಗ ಟೆಂಡರ್‌ದಾರರು/ಬಿಡ್‌ದಾರರು ಮಾತ್ರವೇ ಅವರ ಠೇವಣಿದಾರರ, ಏಜೆಂಟರುಗಳ, ನೌಕರರ ಯಾವುದೇ ಕೃತ್ಯಗಳು, ಚಲನವಲನ ಮತ್ತು ವರ್ತನೆಗಳಿಗೆ ಸಂಪೂರ್ಣ ಜವಾಬ್ದಾರಿಯುಳ್ಳವರಾಗಿರತಕ್ಕದ್ದು. ಟೆಂಡರ್/ಸಾರ್ವಜನಿಕ ಹರಾಜು ನಡೆಯುವ ಆವರಣಗಳಲ್ಲಿ ಯಾವುದೇ ಇತರೆ ಸ್ವತ್ತಿಗೆ ಹಾನಿ ಸಂಭವಿಸಿದಲ್ಲಿ, ನಷ್ಟತುಂಬಲು ಟೆಂಡರುದಾರರು/ಬಿಡ್‌ದಾರರೇ ಹೊಣೆಗಾರರಾಗಿರತಕ್ಕದ್ದು. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ನಿರ್ಧರಿಸಲಾದಷ್ಟು ವೆಚ್ಚವನ್ನು ಸಂಬಂಧಪಟ್ಟ ಟೆಂಡರ್‌ದಾರ/ಬಿಡ್‌ದಾರರಿಂದ ವಸೂಲಿ ಮಾಡತಕ್ಕದ್ದು ಹಾಗೂ ಈ ಸಂಬಂಧದಲ್ಲಿ ಸಚಿವಾಲಯದ ನಿರ್ಣಯವೇ ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ಬಿಡ್‌ದಾರರು ಬದ್ಧವಾಗಿರತಕ್ಕದ್ದು.

**ಟೆಂಡರ್‌ದಾರರು/ಬಿಡ್‌ದಾರರು/ಕಾರ್ಮಿಕರು/ಪ್ರತಿನಿಧಿಗಳಿಗೆ ಸಂಭವಿಸಿದ ಅಪಘಾತಗಳು, ಇತ್ಯಾದಿಗಳು:-**

ಸರ್ಕಾರಿ ಆವರಣಗಳು ಅಥವಾ ಕೆಲಸದ ಸ್ಥಳದಲ್ಲಿ ಸಂಭವಿಸಿದ ಅಪಘಾತಗಳ ಕಾರಣದಿಂದಾಗಿ ಉಂಟಾಗುವ ಯಾವುದೇ ತೊಂದರೆಗಳಿಗೆ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಜವಾಬ್ದಾರಿಯನ್ನು ಹೊಂದುವುದಿಲ್ಲ. ಟೆಂಡರ್‌ದಾರರು/ಬಿಡ್‌ದಾರರೇ ತಮ್ಮ ಕಾರ್ಮಿಕರಿಗೆ/ಪ್ರತಿನಿಧಿಗಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕಾಗಿರುತ್ತದೆ. ಟೆಂಡರ್‌ದಾರರು/ಬಿಡ್‌ದಾರರುಯಾವುದೇ ಪರಿನಿಯಮಗಳ ಅಡಿಯಲ್ಲಿ ಉದ್ಯೋಗದ ಅವಧಿಯಲ್ಲಿ ಉಂಟಾದ ಯಾವುದೇ ಹಾನಿಗಳಿಗೆ ಮಾತ್ರವೇ ಜವಾಬ್ದಾರಿಯುಳ್ಳವರಾಗಿರುತ್ತಾರೆ.

**ಸಂದೇಹಗಳು/ಭಿನ್ನಾಬಿಪ್ರಾಯಗಳು/ವಿವಾದಗಳು:-**

ಟೆಂಡರ್/ಸಾರ್ವಜನಿಕ ಹರಾಜಿನ ಸಮಯದಲ್ಲಿ, ವಾಹನ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ, ಹರಾಜು ಮಾರಾಟವನ್ನು ನಡೆಸುವ ಸಚಿವಾಲಯದ ನಿರ್ಧಾರವೇ ಅಂತಿಮವಾಗಿರತಕ್ಕದ್ದು ಮತ್ತು ಹರಾಜು ಮಾರಾಟಕ್ಕೆ ಪಕ್ಷಕಾರರು ಬದ್ಧರಾಗಿರತಕ್ಕದ್ದು. ಮುಂದುವರೆದು, ಸಂದಾಯ ಮಾಡುವ ಸಮಯದಲ್ಲಿ ಉದ್ಭವಿಸಿದ ಅಂತಹ ಯಾವುದೇ ವಿವಾದಗಳು, ಸಂದೇಹಗಳು, ಬಿನ್ನಾಭಿಪ್ರಾಯಗಳ ಸಂಬಂಧದಲ್ಲಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ನಿರ್ಧಾರವನ್ನು ಟೆಂಡರ್‌ದಾರರು/ಬಿಡ್‌ದಾರರು ಒಪ್ಪಿಕೊಳ್ಳತಕ್ಕದ್ದು ಮತ್ತು ಇದಕ್ಕೆ ಬದ್ಧರಾಗಿರತಕ್ಕದ್ದು.

**ಕಾನೂನು ವ್ಯವಹರಣೆಗಳು:**

ಈ ಹರಾಜಿಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ, ಅಂತಹ ವಿವಾದವನ್ನು ಬೆಂಗಳೂರಿನಲ್ಲಿನ ನ್ಯಾಯಾಲಯಗಳಿಂದ ತೀರ್ಮಾನಿಸತಕ್ಕದ್ದು ಮತ್ತು ಯಾವುದೇ ಇತರೆ ನ್ಯಾಯಾಲಯವು ಅಂತಹ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**(ಕೆ.ಆರ್. ಮಹಾಲಕ್ಷ್ಮಿ)**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.